# ಪ್ರಶ್ನೆಗಳು

ಸಿನಿಮಾ ಸಂಗೀತಗಾರ ಸಂಯೋಜಿಸಿದ ಸಂಗೀತದ ಮಟ್ಟುಗಳಿಗೆ ಹಾಡುಹೊಸೆಯುವ ಕಷ್ಟ ಸಿನಿಕವಿಗಳದ್ದು. ಈ ಕಾಯಕದಲ್ಲಿ ಬಹುಕಾಲದಿಂದ ತೊಡಗಿಸಿಕೊಂಡಿರುವ ಕನ್ನಡ ಸಿನಿಕವಿಗಳ ಎದುರಿಗೆ 'ಮಯೂರ' ಪುಟ್ಟಪ್ರಶ್ನಾವಳಿಯನ್ನು ಇಟ್ಟಿತ್ತು. ಅದಕ್ಕೆ ಅವರು ಕೊಟ್ಟ ಚುರುಕಾದ ಉತ್ತರಗಳು ಮುಂದಿನ ಪುಟಗಳಲ್ಲಿವೆ.

**ನಿರ್ವಹಣೆ:**
**ಶಶಿಕುಮಾರ್ ಸಿ.**

1 ಹಾಡು ಬರೆಯಬೇಕಾದ ಟ್ಯೂನ್ ಕೇಳಿದ ಮೇಲೆ ಸಿನಿಮಾದ ಸನ್ನಿವೇಶಕ್ಕೆ ಅನುಗುಣವಾಗಿ ಯಾವ ಬಗೆಯ ಸಿದ್ಧತೆ ಮಾಡಿಕೊಳ್ಳುತ್ತೀರಿ?

2 ನೀವು ಬರೆದ ಸಾಲುಗಳು ಟ್ಯೂನ್‌ಗೆ ಸರಿಯಾಗಿ ಹೊಂದಿಕೊಂಡಿವೆ ಎಂಬುದು ಹೇಗೆ ಗೊತ್ತಾಗುತ್ತದೆ?

3 ಒಂದೇ ಬಗೆಯ ಹಾಡುಗಳನ್ನು (ಪ್ರೀತಿ, ಪ್ರೇಮ, ವಿರಹದ ಹಾಡುಗಳೇ ಹೆಚ್ಚಾಗಿರುತ್ತವೆ) ಬರೆಯುವಾಗ ಇರುವ ಸವಾಲು ಯಾವ ಬಗೆಯದು? ಮತ್ತೆ ಮತ್ತೆ ಅದೇ ವಸ್ತುವಿನ ಕುರಿತು ಬರೆಯಬೇಕಾದಾಗ ಅವುಗಳಲ್ಲಿ ಹೊಸತನ ಹೇಗೆ ತರುತ್ತೀರಿ?

4 ಸಂಗೀತ ನಿರ್ದೇಶಕರು ಕೊಟ್ಟ ಡೆಡ್‌ಲೈನ್ (ಅಂತಿಮ ಗಡುವು) ಒಳಗೆ ಹಾಡನ್ನು ಬರೆಯಲು ಸಾಧ್ಯವಾಗುತ್ತದೆಯೇ? ಆಗ ಅನುಭವಿಸುವ ತಳಮಳ, ಒತ್ತಡಗಳೇನು?

5 ನೀವು ಬರೆದ ಹಾಡು ನಿಮಗೇ ಯಾವಾಗ ಖುಷಿ ಕೊಡುತ್ತದೆ? ಮತ್ತು ಅದನ್ನು ಬರೆದದ್ದು ಸಾರ್ಥಕ ಎನಿಸುವುದು ಯಾವಾಗ? (ಅಂತಹ ಒಂದೆರಡು ಘಟನೆಗಳಿದ್ದರೆ ವಿವರಿಸಿ).

6 ಈ ತನಕ ಬಂದ ಅತ್ಯುತ್ತಮ ಕನ್ನಡ ಸಿನಿಮಾ ಹಾಡುಗಳು ಯಾವುವು? ನಿಮ್ಮ ಪ್ರಕಾರ ಅವು ಯಾಕೆ ಅಷ್ಟು ಚೆನ್ನಾಗಿವೆ? ಅವು ನಿಮ್ಮ ಮೇಲೆ ಬೀರಿದ ಪ್ರಭಾವ ಯಾವ ರೀತಿಯದು?

7 ಕನ್ನಡದ ಈಗಿನ ಯಾವ ಯಾವ ಸಿನಿಮಾಕವಿಗಳು ಕಸುಬಿನ ದೃಷ್ಟಿಯಿಂದ ಮುಖ್ಯ ಅನ್ನಿಸುತ್ತಾರೆ?

8 ನಿಮ್ಮ ಹಾಡಿನ ರೆಕಾರ್ಡಿಂಗ್ ಮುಗಿದ ಬಳಿಕ ಅದನ್ನು ಕೇಳಿದ ಮೇಲೆ ಇದನ್ನು ಬೇರೆ ರೀತಿ ಬರೆಯಬಹುದಾಗಿತ್ತು ಅನ್ನಿಸಿದ ಸಂದರ್ಭಗಳು ಇವೆಯಾ?